ಬೆಳ್ಳಿಯ ಒಡವೆಗಳನ್ನು ಸಣ್ಣ ಟ್ರಂಕಿನಲ್ಲಿ ತುಂಬಿಕೊಂಡು, ಅದನ್ನು ಹಳೆಯ ಗೋಣಿ ಚೀಲದಲ್ಲಿ ಕಟ್ಟಿ, ಈ ದಿನ ಎಷ್ಟೊತ್ತಿದ್ದರೂ ಮಗಳಿಗೆ ಮುಟ್ಟಿಸಿ ಬರಬೇಕೆಂದು ನಿಶ್ಚಯಿಸಿದ್ದಳು. ಆಕೆ ಬದುಕಿನುದ್ದಕ್ಕೂ ಗಳಿಸಿದ ಭಂಡಾರ ಆ ಟ್ರಂಕಿನಲ್ಲಿತ್ತು. ಜಗಲಿಯ ಮೇಲಿನ ಹಾಲಕೆರೆ ಅಜ್ಜನಿಗೆ ಕೈಮುಗಿದು, ಹಳೆಯ ಗೋಣಿ ಚೀಲದಲ್ಲಿ ಕಟ್ಟಿದ ಸಣ್ಣ ಟ್ರಂಕನ್ನು ಎತ್ತಿಕೊಂಡು ಹೊರಟೇ ಬಿಟ್ಟಳು. ಮಗಳ ಊರಿಗೆ ಹೋಗಬೇಕಾದರೆ ರೈಲು ಹತ್ತಬೇಕು. ಒಂದುವರೆ ತಾಸಿನ ಪಯಣ. ಕಟಗೇರಿ ರೈಲು ನಿಲ್ದಾಣ ತನ್ನ ಊರಿಂದ ಹತ್ತು ಮೈಲಿ ದೂರದಲ್ಲಿದೆ. ಮಗ್ಗಲುಮನೆಯ ರಂಗಪ್ಪನಿಗೆ ಹೇಳಿ ಅವನ ಬೈಕಿನಲ್ಲಿ ಹಿಂದೆ ಕುಳಿತು, ಟ್ರಂಕು ತೊಡೆಯ ಮೇಲಿಟ್ಟುಕೊಂಡು ರೈಲು ನಿಲ್ದಾಣಕ್ಕೆ ಹೊರಟಳು. ಸದ್ಯ ರಾತ್ರಿ ಏಳು ಮೂವತ್ತು ಗಂಟೆಯಾಗಿದೆ. ರೈಲು ನಿಲ್ದಾಣ ಮುಟ್ಟುವ ಹೊತ್ತಿಗೆ ಎಂಟು ಗಂಟೆಯಾಗುತ್ತದೆ. ರಾತ್ರಿ ಒಂಬತ್ತು ಗಂಟೆಗೆ ಮಗಳ ಊರಿನ ರೈಲಿದೆ. ಒಂದುವರೆ ತಾಸಿನ ಪಯಣ. ರಾತ್ರಿ ಹತ್ತುವರೆಗೆ ಮಗಳ ಮನೆ ಮುಟ್ಟುತ್ತಾಳೆ.

ರಂಗಪ್ಪ ರೈಲು ನಿಲ್ದಾಣಕ್ಕೆ ಮಾಂತಮ್ಮನನ್ನು ಕರೆತಂದು, ತಿಕೀಟು ಮಾಡಿಸಿ ಆಕೆಯ ಕೈಗೆ ಕೊಟ್ಟು, ಹುಷಾರಾಗಿ ಹೋಗು ಎಂದು ಹೇಳಿ, ಬೈಕಿನಲ್ಲಿ ಊರಿಗೆ ಮರಳಿ ಹೊರಟುಹೋದ. ಮಾಂತಮ್ಮ ಸಣ್ಣ ಟ್ರಂಕನ್ನು ಹೆಗಲ ಮೇಲೆ ಇಟ್ಟುಕೊಂಡು ಸಾವಕಾಶವಾಗಿ ರೈಲು ನಿಲ್ದಾಣದ ಫ್ಲ್ಯಾಟ್‌ಫಾರ್ಮ್ ಕಡೆ ಹೊರಟಳು. ನಿಲ್ದಾಣದಲ್ಲಿ ಒಂದು ನರಪಿಳ್ಳೆಯೂ ಇಲ್ಲ. ನಿಧಾನವಾಗಿ ನಡೆದು ಅಲ್ಲಿಯೇ ಸಮೀಪದಲ್ಲಿದ್ದ ಮುರುಕು ಸಿಮೆಂಟ್ ಬೆಂಚಿನಮೇಲೆ ಕುಳಿತಳು. ಯಾಕೋ ಮನಸ್ಸಿಗೆ ತುಂಬಾ ಆಯಾಸವೆನಿಸಿತ್ತು. ಆಕೆಗೆ ಸದ್ಯ ತನ್ನ ಉಸಿರಿನ ಸಪ್ಪಳ ಬಿಟ್ಟು ಮತ್ತೇನೂ ಕೇಳುತ್ತಿರಲಿಲ್ಲ. ಟ್ರಂಕನ್ನು ಗಟ್ಟಿಯಾಗಿ ಹಿಡಿದುಕೊಂಡು ಬೆಂಚಿನ ಮೇಲೆಯೇ ನಿದ್ರೆಹೋದಳು. ಆಕೆಗೆ ಎಚ್ಚರಾದಾಗ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಎಚ್ಚರವಾಗುತ್ತಿದ್ದಂತೆ ಬೆಚ್ಚಿಬಿದ್ದಳು. ನಿಲ್ದಾಣದಲ್ಲಿಯ ಒಂದೆರಡು ದೀಪಗಳು ಕಣ್ಣಿಗೆ ಪರೆಬಂದಂತೆ ಉರಿಯುತ್ತಿದ್ದವು. ಮೈಯಲ್ಲಾ ಬೆವರಲಾರಂಭಿಸಿದಳು. ಗಂಟಲಿನಲ್ಲಿ ಕಬ್ಬಿಣದ ಮೊಳೆ ಅಡ್ಡ ಸಿಕ್ಕ ಹಾಗೆ ಯಾತನೆ ಅನುಭವಿಸಿದಳು. ದೂರದಿಂದ ಸಣ್ಣ ದೀಪ ಹಿಡಿದ ಕಪ್ಪಗಿನ ಆಕೃತಿಯೊಂದು ಆಕೆಯ ಕಡೆಗೇ ಬರಹತ್ತಿತ್ತು. ಈಗ ನಿಜವಾಗಿಯೂ ಬೆಚ್ಚಿಬಿದ್ದಳು. ಅದು ಸವಕಾಶವಾಗಿ ಆಕೆಯ ಹತ್ತಿರವೇ ಬಂದಿತು. ಕೈಯಲ್ಲಿ ತೂಗುವ ದೀಪ ಹಿಡಿದಿತ್ತು. ಮುದುಕಿ ಕಣ್ಣು ಮೇಲೆತ್ತಿ ನೋಡಿದಳು. ಅದು ಮನುಷ್ಯನ ಆಕೃತಿಯಾಗಿತ್ತು.

'ಯಾರಮ್ಮ ಇಷ್ಟು ಹೊತ್ತಿನಲ್ಲಿ ಒಬ್ಬಳೇ ಕುಳಿತಿರುವಿ?' ಎಂದು ಕೇಳಿದ. 'ನಾನು ಈ ಸ್ಟೇಶನ್ ಮೇಲ್ವಿಚಾರಕ. ಸದ್ಯ ಎಲ್ಲ ರೈಲುಗಳು ಹೋಗಿವೆ,' ಎಂದ.

'ರಂಗಾಪುರದ ರೈಲು ಹೋಯಿತೆ?' ಎಂದು ಗಾಬರಿಯಲ್ಲಿ ಕೇಳಿದಳು.

'ಹೋಗಿ ಒಂದು ತಾಸು ಆಯ್ತು!' ಎಂದ.

ಆಕೆಗೆ ದಿಕ್ಕೇ ತೋಚದಂತಾಯ್ತು.

'ಇನ್ನೇನಿದ್ದರೂ ರಂಗಾಪುರಕ್ಕೆ ರೈಲು ಬೆಳಿಗ್ಗೆ ಐದು ಗಂಟೆಗೆ' ಎಂದು ಹೇಳಿದ. ಆಕೆಗೆ ಉಸಿರೇ ಹೊರಟು ಹೋಗಿತ್ತು. ತೊಡೆಯ ಮೇಲಿನ ಗೋಣಿ ಚೀಲದ ಟ್ರಂಕನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು.

'ಈಗ ಮೇಲೇಳು. ಇಲ್ಲಿಯೇ ನನ್ನ ರೂಮಿನ ಪಕ್ಕದಲ್ಲಿ ವಿಶ್ರಾಂತಿ ಕೊಠಡಿ ಇದೆ. ಅಲ್ಲಿ ಇರು, ನಾನು ನಸುಕಿನಲ್ಲಿ ನಿನಗೆ ರೈಲು ಹತ್ತಿಸುವೆ,' ಎಂದು ಹೇಳಿದ. ನಿರ್ಜನವಾದ ಆ ಪ್ರದೇಶದಲ್ಲಿ ಆಕೆಗೆ ಹೇಳಲು ಯಾವ ಮಾತೂ ಉಳಿದಿರಲಿಲ್ಲ. ಅವನು ಕರೆದುಕೊಂಡು ಹೋದ ಕೊಠಡಿಗೆ